# ಬಹುರೂಪಿ ಭಗವದ್ಗೀತೆ

ಈ ದಿನಗಳಲ್ಲಿ ಭಗವದ್ಗೀತೆಯನ್ನು ಕುರಿತಾದ ವಾದ ವಿವಾದಗಳೂ, ತರ್ಕ ಪ್ರತಿ ತರ್ಕಗಳೂ ವಿವಿಧ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಪ್ರಯಾಃ ಪ್ರಪಂಚದ ಯಾವುದೇ ಧಾರ್ಮಿಕ ಗ್ರಂಥದ ಬಗೆಗೆ ಇಷ್ಟೊಂದು ಚರ್ಚೆಯಾದಂತಿಲ್ಲ. ಗೀತೆಯನ್ನು ವಿರೋಧಿಸುವವರು ಅದೊಂದು ಹಿಂಸೆಯನ್ನು ಪ್ರಚೋದಿಸುವ, ಜಾತಿ ಪದ್ಧತಿಯನ್ನು ಬೆಂಬಲಿಸುವ ಪ್ರತಿಗಾಮೀ ಪ್ರವೃತ್ತಿಯ ಗ್ರಂಥವೆನ್ನುತ್ತಾರೆ. ಒಂದಕ್ಕೊಂದು ಹೊಂದಿಕೆಯಾಗದ ಭಿನ್ನ ಸಿದ್ಧಾಂತಗಳಿಂದ ಗೊಂದಲ ಹುಟ್ಟಿಸುವ ಗ್ರಂಥ ಭಗವದ್ಗೀತೆ ಎನ್ನುವ ಅಭಿಪ್ರಾಯ ಕೆಲವರದು. ಯಾವುದೇ ಪೂರ್ವಗ್ರಹವಿಲ್ಲದೆ ಗೀತೆಯನ್ನು ಅರ್ಥಮಾಡಿಕೊಂಡರೆ ಇಂಥ ಆಪಾದನೆಗಳಲ್ಲಿ ಹುರುಳಿಲ್ಲವೆಂದು ಗೊತ್ತಾಗುತ್ತದೆ ಎಂಬುದು ಗೀತೆಯನ್ನು ಬೆಂಬಲಿಸುವವರ ಮಾತು. ಇಂಥ ವಾದ ಪ್ರತಿವಾದಗಳು ಭಗವದ್ಗೀತೆಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಶ್ಲೇಷಿಸಲು ಪ್ರೇರಣೆ ನೀಡುತ್ತವೆ ಎಂಬುದಂತೂ ಸತ್ಯ.

ಭಗವದ್ಗೀತೆಯ ಸ್ವರೂಪ ಅತ್ಯಂತ ಸಂಕೀರ್ಣವಾದುದು. ಭಾರತೀಯ ಮನಸ್ಸು ದೇಹ – ಆತ್ಮ, ಹುಟ್ಟು –ಸಾವು, ಕರ್ಮ – ಅಕರ್ಮ, ಜ್ಞಾನ – ಭಕ್ತಿ, ಇತ್ಯಾದಿಗಳನ್ನು ಕುರಿತು ಮಾಡಿದ ಸಹಸ್ರಾರು ವರ್ಷಗಳ ಚಿಂತನೆಗಳ ಕನೆ ಗೀತೆಯಲ್ಲಿದೆ. ವೇದಗಳಲ್ಲಿ ಪ್ರಾರಂಭವಾದ ಭಾರತೀಯ ತಾತ್ವಿಕ ಚಿಂತನೆ, ಉಪನಿಷತ್ತುಗಳಲ್ಲಿ ವಿಕಸಿತವಾಗಿ, ಗೀತೆಯಲ್ಲಿ ಹರಳು ಗಟ್ಟಿದೆ ಎನ್ನಬಹುದು. ಗೀತೆಯ ಧ್ಯಾನಶ್ಲೋಕದಲ್ಲಿಯೇ ಅದು ಸರ್ವೋಪನಿಷತ್ತುಗಳ ಸಾರವೆಂಬ ಸ್ಪಷ್ಟ ಸೂಚನೆಯಿದೆ. ಈ ಬಗೆಯ ಸಂಕೀರ್ಣತೆಯಿಂದಾಗಿಯೇ ಅದು ಕಾಲದಿಂದ ಕಾಲಕ್ಕೆ ವಿವಿಧ ಭಾಷ್ಯ, ವ್ಯಾಖ್ಯಾನಗಳ ಮೂಲಕ ಶೋಧನೆಗೆ, ವಿಮರ್ಶೆಗೆ ಒಳಗಾಗಬೇಕಾಯಿತು. ಪ್ರಾಚೀನರಾದ ಶಂಕರ, ರಾಮಾನುಜ, ಮಧ್ವರಂಥ ಮತಾಚಾರ್ಯರು ಗೀತೆಯನ್ನು ತಮ್ಮ ತಮ್ಮ ಸಿದ್ಧಾಂತಗಳ ಪ್ರತಿಪಾದನೆಗೆ ಬಳಸಿಕೊಂಡಿದ್ದಾರೆ. ಅರ್ವಾಚೀನರಾದ ತಿಲಕ್, ಗಾಂಧೀಜಿ, ಅರಬಿಂದೋ, ರಾಧಾಕೃಷ್ಣನ್, ವಿನೋಬಾ – ಮುಂತಾದವರೂ ಗೀತೆಯನ್ನು ಕರ್ಮಯೋಗ, ಅನಾಸಕ್ತಿಯೋಗ – ಹೀಗೆ ಹಲವು ನಿಟ್ಟಿನಲ್ಲಿ ಅರ್ಥೈಸಿದ್ದಾರೆ. ನಮ್ಮವರೇ ಆದ ಡಿ.ವಿ.ಜಿ. ಅದನ್ನು ಅರ್ಥಪೂರ್ಣವಾಗಿ 'ಜೀವನ ಧರ್ಮಯೋಗ' ಎಂದು ಕರೆದಿದ್ದಾರೆ. ಒಟ್ಟಿನಲ್ಲಿ ಭಗವದ್ಗೀತೆ 'ಅವರವರ ಭಾವಕ್ಕೆ, ಅವರವರ ದರುಶನಕೆ' ಸೂಕ್ತವಾಗಿ ಹೊಂದಿಕೊಳ್ಳುವ ಅದ್ಭುತ ದಾರ್ಶನಿಕ ಕೃತಿ ಎನ್ನಬಹುದು. ಗೀತೆಯನ್ನು ಕುರಿತಾಗಿ ನಡೆಯುತ್ತಿರುವ ಚಿಂತನೆ, ಉಪನ್ಯಾಸ, ಚರ್ಚೆಗಳು, ಅದರ ಸಾರ್ವಕಾಲಿಕತೆಯನ್ನು ಸೂಚಿಸುವುದಷ್ಟೇ ಅಲ್ಲ, ಅದರಲ್ಲಿನ 'ಪ್ರವಚನ ಪ್ರಚೋದನಾ ಸಾಮರ್ಥ್ಯ'ವನ್ನೂ ಬೊಟ್ಟು ಮಾಡಿ ತೋರಿಸುತ್ತವೆ.

ಭಗವದ್ಗೀತೆ ಬಹುಮುಖಿಯಾದುದು, ಅದನ್ನು 'ಮಾನವ ಚಿಂತನೆಗಳ ವಿಶ್ವಕೋಶ' ಎನ್ನಬಹುದು. ಅದರಲ್ಲಿ ಮೋಕ್ಷಶಾಸ್ತ್ರ, ತತ್ವಶಾಸ್ತ್ರ, ಯೋಗಶಾಸ್ತ್ರ, ಮನಶಾಸ್ತ್ರ – ಎಲ್ಲವೂ ಇವೆ. ವಿಶ್ವವಾಙ್ಮಯದಲ್ಲಿ ಮೊಟ್ಟಮೊದಲು ಕಾಣಿಸಿಕೊಂಡ ವ್ಯಕ್ತಿತ್ವ ವಿಕಸನ ಕೃತಿ ಭಗವದ್ಗೀತೆ ಎಂದರೂ ತಪ್ಪಲ್ಲ, ಏಕೆಂದರೆ ಅದರಲ್ಲಿ ಕರ್ಮ, ಜ್ಞಾನ, ಧ್ಯಾನ, ಭಕ್ತಿ – ಹೀಗೆ ಹಲವು ಹಂತಗಳಲ್ಲಿ ಬದುಕು ಅರಳಿಕೊಳ್ಳಬಹುದಾದ ಮಾರ್ಗದರ್ಶಕ ಸೂಚನೆಗಳಿವೆ. ಎಲ್ಲಕ್ಕೂ ಮಿಗಿಲಾಗಿ ಗೀತೆಯ ಬೋಧನೆ ನಿರ್ದಿಷ್ಟ ಮತ, ಪಂಥಗಳಿಗೆ ಸೀಮಿತವಾಗಿಲ್ಲ. ಮನುಕುಲದ ಒಳಿತನ್ನೇ ಅದು ದೃಷ್ಟಿಯಲ್ಲಿರಿಸಿಕೊಂಡಿದೆ. ಗೀತೆ ಪ್ರತಿಪಾದಿಸುವ ಚತುರ್ವರ್ಣಗಳು ವ್ಯಕ್ತಿಯ ಗುಣ ಕರ್ಮಗಳನ್ನು ಅವಲಂಬಿಸಿರುವಂಥವೇ ವಿನಾ, ಈಗಿನ ಜಾತಿಪದ್ಧತಿಯಂತೆ – ಉತ್ತಮಾಧಮ ಸ್ತರವಿಂಗಡಣೆಗೆ ಕಾರಣವಾಗಿರುವಂಥ – ಹುಟ್ಟಿನಿಂದ ನಿರ್ಧರಿತವಾಗುವಂಥವಲ್ಲ. ಕೆಲವರ ಅಭಿಪ್ರಾಯದಂತೆ ಗೀತೆ ಹಿಂಸೆಯನ್ನು ಪ್ರಚೋದಿಸುವ ಕೆಲಸ ಮಾಡುವುದಿಲ್ಲ. ಅನಿವಾರ್ಯವೆನ್ನಿಸಿದ ಯುದ್ಧದ ಸಂದರ್ಭದಲ್ಲಿ ಕ್ಷತ್ರಿಯನಾದ ಅರ್ಜುನನಲ್ಲಿ ಕಾಣಿಸಿಕೊಂಡ ಕ್ಷಣಿಕ ಕ್ಲೈಬ್ಯವನ್ನು ಹೋಗಲಾಡಿಸಿ, ಕರ್ತವ್ಯ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಶ್ರೀಕೃಷ್ಣ ಗೀತೋಪದೇಶ ಮಾಡುತ್ತೇನೆ. ಕರ್ತವ್ಯಕ್ಕೆ ಬೆನ್ನುಹಾಕದೇ, ಫಲಕ್ಕಾಗಿ ಚಿಂತಿಸದೇ, ಕ್ರಿಯೆಯಲ್ಲಿ ತೊಡಗಿಕೊಳ್ಳಬೇಕೆಂಬುದು ಗೀತೆಯ ಸಂದೇಶ. ಜ್ಞಾನ ಮತ್ತು ಕರ್ಮಗಳ ಅವಿನಾಭಾವ ಸಂಬಂಧವನ್ನು ಗೀತೆ ಸ್ಪಷ್ಟ ಪಡಿಸುತ್ತದೆ; ಭಕ್ತಿಯೋಗದ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತದೆ. ಗೀತೆಯ ಪ್ರಕಾರ ಭಕ್ತಿ ಎಂಬುದು ಕರ್ಮ ಮತ್ತು ಜ್ಞಾನ ಹುಟ್ಟುಹಾಕಬಹುದಾದ ಅಹಂಕಾರವನ್ನು ತೊಡೆದು ಹಾಕುವ ಭಾವವಿರೇಚಕ, ಆದ್ದರಿಂದಲೇ ಭಗವದ್ಗೀತೆ ಭಕ್ತಿಯೋಗ ಪ್ರತಿಪಾದನೆಯಲ್ಲಿ, ಅಥವಾ ಸರ್ವಾರ್ಪಣ ಸಿದ್ಧಾಂತದಲ್ಲಿ ವಿರಮಿಸುತ್ತದೆ.

ಭಗವದ್ಗೀತೆ ಕೇವಲ ಕಾವ್ಯ ಧಾರ್ಮಿಕ ಗ್ರಂಥವಲ್ಲ. ಅದೊಂದು ಧ್ವನಿ ರಮ್ಯವಾದ ಕಾವ್ಯವೂ ಹೌದು. ಗೀತೋಪದೇಶವನ್ನು ಮಾಡುವ ಶ್ರೀಕೃಷ್ಣ ಕುರುಕ್ಷೇತ್ರದಲ್ಲಿ ಅರ್ಜುನನ ರಥವನ್ನು ನಡೆಸುವ ಸಾಮಾನ್ಯ ಸಾರಥಿಯಲ್ಲ; ಧರ್ಮಕ್ಷೇತ್ರದ ಕಡೆಗೆ ಅರ್ಜುನನ 'ಭಾವರಥ'ವನ್ನು ನಡೆಸುವ ಪಾರ್ಥಸಾರಥಿ ಆತ. ಆತನ ಸಾರಥ್ಯದಲ್ಲಿ ಅರ್ಜುನ ವಿಷಾದ – ವಿದ್ವಲತೆಗಳನ್ನು ದೂರಮಾಡಿ, ಪ್ರಸನ್ನತೆ, ಪ್ರಶಮನಗಳತ್ತ ಮುಖ ಮಾಡುತ್ತಾನೆ. ಸಖನೂ, ಸಾರಥಿಯೂ ಆಗಿದ್ದ ಶ್ರೀಕೃಷ್ಣನ ವ್ಯಕ್ತಿತ್ವ ಬೃಂಡಿತೆಗೊಂಡು ಅರ್ಜುನನಿಗೆ ಆತನ 'ವಿಶ್ವರೂಪ'ದ ದರ್ಶನವಾಗುತ್ತದೆ. ವಿಶ್ವವನ್ನು ನಿಯಂತ್ರಿಸುವ ಮಹಾಚೈತನ್ಯ ಹೊರಸೂಸುವ ಬೆಳಕಿನಲ್ಲಿ ಲೋಕ ಜೀವನದ ಎಲ್ಲ ರಹಸ್ಯಗಳೂ ಅರ್ಜುನ ಎದುರು ಪ್ರಕಟಗೊಳ್ಳುತ್ತವೆ. ಭಗವದ್ಗೀತೆಯಿಂದಾಗಿ ಅರ್ಜುನನಲ್ಲಿದ್ದ 'ಮಾನುಷ ಭಾವ' ಮರೆಯಾಗಿ 'ದೇವಭಾವ' ಪುಟದೇಳುವಂತಾಗುತ್ತದೆ!

■ ವೈನತೇಯ

## ಮಾತೇ ಮುತ್ತು

★ ಒಂದು ಟನ್ನಿನಷ್ಟು ಉಪದೇಶಕ್ಕಿಂತ ಒಂದು ಔನ್ಸಿನಷ್ಟು ತಾಳ್ಮೆ ಮೇಲು.

–ಮಹಾತ್ಮಾ ಗಾಂಧೀಜಿ

★ ಬೆಳಕಿನಲ್ಲಿ ಒಬ್ಬಂಟಿಯಾಗಿ ನಡೆಯುವುದಕ್ಕಿಂತ ಕತ್ತಲಲ್ಲಿ ಸ್ನೇಹಿತರ ಜತೆ ನಡೆಯುವುದು ಒಳ್ಳೆಯದು.

–ಹೆಲೆನ್ ಕೆಲ್ಲರ್

★ ನಿಮಗೆ ನೀವೇ ಆಗಿರಲು ಎಲ್ಲ ಸ್ವಾತಂತ್ರ್ಯವನ್ನೂ ಕೊಡುವವನೇ ನಿಜವಾದ ಗೆಳೆಯ.

–ಜಿಮ್ ಮಾರಿಸನ್

★ ಕೇಳಿಸಿಕೊಂಡ್ರೆ ಮರೆತುಹೋಗುತ್ತೆ, ನೋಡಿದ್ರೆ ನೆನಪಿರುತ್ತೆ, ಸ್ವತಃ ಮಾಡಿದ್ರೆ ಅರ್ಥವಾಗುತ್ತೆ.

–ಚೀನೀ ಗಾದೆ

★ ನಿಮ್ಮನ್ನು ನಿಂದಿಸುವ ಜನರನ್ನು ಆಶೀರ್ವದಿಸಿ. ನಿಮ್ಮಲ್ಲಿರುವ ದುರಹಂಕಾರವನ್ನು ಹತ್ತಿಕ್ಕಲು ಅವರು ಎಷ್ಟೊಂದು ಸಹಾಯ ಮಾಡುತ್ತಿದ್ದಾರೆ ಎಂಬುದನ್ನು ಯೋಚಿಸಿ.

–ಸ್ವಾಮಿ ವಿವೇಕಾನಂದ

★ ಧರ್ಮ ಎನ್ನುವುದು ನಂಬಿಕೆಯ ಪ್ರಶ್ನೆ. ನಂಬಿಕೆ ಮನಸ್ಸಿಗೆ ಮಿತಿ ಹೇರುತ್ತದೆ. ಹಾಗಿದ್ದಾಗ ಮನಸ್ಸು ಯಾವತ್ತೂ ಮುಕ್ತವಾಗಿರುವುದಿಲ್ಲ.

–ಜಿಡ್ಡು ಕೃಷ್ಣಮೂರ್ತಿ

★ ಅಂತಿಮವಾಗಿ ನೀವು ಎಷ್ಟು ವರ್ಷ ಬದುಕಿದ್ದೀರಿ ಎನ್ನುವುದು ಮುಖ್ಯವಾಗುವುದಿಲ್ಲ. ಯಾವ ವರ್ಷ ಬದುಕಿ ಇದ್ದೀರಿ ಎನ್ನುವುದು ಮುಖ್ಯವಾಗುತ್ತದೆ.

–ಅಬ್ರಹಾಂ ಲಿಂಕನ್

★ ನೀವು ಪ್ರೀತಿಸುವ ಉದ್ಯೋಗವನ್ನೇ ಆಯ್ಕೆ ಮಾಡಿಕೊಳ್ಳಿ. ಮುಂದೆ ಜೀವನದಲ್ಲಿ ಒಂದು ದಿನವೂ ನಿಮಗೆ ಕೆಲಸ ಮಾಡಿದ್ದೇನೆ ಅನ್ನಿಸುವುದಿಲ್ಲ.

–ಕನ್‌ಫ್ಯೂಷಿಯಸ್

★ ನೀವು ಮಾಡಬಹುದೆಂದು ಆಲೋಚಿಸಿಯೂ ಇಲ್ಲದ ಕೆಲಸಗಳನ್ನು ಮಾಡಲು ಮೊದಲು ಮನಸ್ಸನ್ನು ಮುಕ್ತವಾಗಿಡಿ. ಸಾಧ್ಯವಿಲ್ಲ ಎಂದು ಯಾವತ್ತೂ ಆಲೋಚಿಸಬೇಡಿ.

–ಕಾರ್ಲ್ ಲೂಯಿಸ್

★ ಬದುಕಿದ್ದಾಗ ಆತನಿಗೆ ಇಡೀ ಜಗತ್ತೇ ಸಾಲದು ಎನ್ನಿಸುತ್ತಿತ್ತು; ಸತ್ತ ಬಳಿಕ ಸಣ್ಣದೊಂದು ಗೋರಿಯೂ ಸಾಕಾಗುತ್ತದೆ.

–ಚಕ್ರವರ್ತಿ ಅಲೆಗ್ಸಾಂಡರ್